2017 ಕ.ತೀ.ವ. 1197

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರಾಘವೇಂದ್ರ ಎಸ್. ಚೌಹಾಣ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್

ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ –ವಿರುದ್ಧ–
ಉದಯ್‌ಕುಮಾರ್ ಮತ್ತು ಇತರರು*

ಕರ್ನಾಟಕ ಉಚ್ಚ ನ್ಯಾಯಾಲಯಗಳ ಕಾಯಿದೆ ಕಲಂ 4 ರಡಿಯಲ್ಲಿ ರಿಟ್ ಮೇಲ್ಮನವಿ.

ಮಧ್ಯಸ್ಥಿಕಾ ನಡವಳಿಗಳನ್ನು ಪ್ರಾರಂಭಿಸುವಲ್ಲಿ 5 ವರ್ಷಗಳ ಕಾಲ ವಿಳಂಬವನ್ನು ಮನ್ನಿಸಿ ಆದೇಶಿಸಿದ ಜಿಲ್ಲಾಧಿಕಾರಿ ಹಾಗೂ ಮಧ್ಯಸ್ಥಿಕೆದಾರರ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿದಾರರು ಏಕಸದಸ್ಯ ಪೀಠದಲ್ಲಿ ಪ್ರಶ್ನಿಸಲಾಗಿ, ರಿಟ್ ಅರ್ಜಿಯು ಪುರಸ್ಕೃತಗೊಳ್ಳುತ್ತದೆ. ಏಕಸದಸ್ಯ ಪೀಠದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಮೇಲ್ಮನವಿ.

ಮಧ್ಯಸ್ಥಿಕೆದಾರರು 5 ವರ್ಷಗಳ ಕಾಲವಿಳಂಬವನ್ನು ಮನ್ನಿಸಿದ ಕ್ರಮವನ್ನು ಎತ್ತಿಹಿಡಿದ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠವು ಏಕಸದಸ್ಯ ಪೀಠದ ಆದೇಶದಲ್ಲಿ ಯಾವುದೇ ಅನ್ಯಾಯ ಅಥವಾ ವಕ್ರತೆಯಿಲ್ಲವೆಂದು ಅಭಿಪ್ರಾಯಪಟ್ಟು ಸದರಿ ಮೇಲ್ಮನವಿಯನ್ನು ವಜಾಗೊಳಿಸಿದೆ.

---

* ರಿಟ್ ಅಪೀಲು ಸಂ.31169–31180/2013 (ಜಿಎಂ–ಆರ್‌ಇಎಸ್)
ದಿನಾಂಕ: 6ನೇ ಡಿಸೆಂಬರ್, 2016.

*ಉಲ್ಲೇಖಿಸಲಾದ ಮೊಕದ್ದಮೆ:* **ಪ್ಯಾರಾದಲ್ಲಿ**

*1. (1997) 6 ಎಸ್‌ಸಿಸಿ 73*
*ಉತ್ತಮ್ ನಾಮ್‌ದೇವ್ ಮಹಲೆ –ವಿರುದ್ಧ–*
*ವಿತಲ್‌ದೇವ್ ಮತ್ತು ಇತರರು* *(ಉಲ್ಲೇ) 4*

ಅಪೀಲುದಾರರ ಪರವಾಗಿ: ಶ್ರೀ ಸಚಿನ್ ಎಸ್. ಮಗಧಮ್, ವಕೀಲರು.
1 ರಿಂದ 9, 11 ರಿಂದ 13ನೇ
ಪ್ರತ್ಯಪೀಲುದಾರರ ಪರವಾಗಿ: ಶ್ರೀ ಎಸ್.ಎಂ. ಕಲ್‌ವಾಡ್, ವಕೀಲರು.
15ನೇ ಪ್ರತ್ಯಪೀಲುದಾರರ ಪರವಾಗಿ : ಸರ್ಕಾರಿ ವಕೀಲರು
10ಎ, ಬಿ, ಸಿ, ಡಿ ಮತ್ತು 14ನೇ ಪ್ರತ್ಯಪೀಲುದಾರರಿಗೆ ನೋಟೀಸುಗಳನ್ನು ಜಾರಿಮಾಡಲಾಗಿದೆ.

## ತೀರ್ಪು

**ನ್ಯಾಯಮೂರ್ತಿ ರಾಘವೇಂದ್ರ ಎಸ್. ಚೌಹಾಣ್:**

ರಿಟ್ ಅಪೀಲು ಸಂ. 63433/2011 ಮತ್ತು 76142–76152/2013 ರಲ್ಲಿ ಮಾನ್ಯ ಏಕಪೀಠ ನ್ಯಾಯಾಧೀಶರು ಮಾಡಿದ ಆದೇಶ ದಿನಾಂಕ 15.02.2013 ರಿಂದ ಬಾಧಿತರಾದ ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ ಈ ನ್ಯಾಯಾಲಯಕ್ಕೆ ಮನವಿಮಾಡಿದೆ. 1 ರಿಂದ 14ನೇ ಎದುರುದಾರರ ಮೂಲಕ ಮಧ್ಯಸ್ಥಿಕೆ ವ್ಯವಹರಣೆಗಳನ್ನು ಪ್ರಾರಂಭಿಸಿದ ನಾಲ್ಕು ವರ್ಷಗಳ ವಿಳಂಬವನ್ನು ಮನ್ನಾಮಾಡಲಾಗಿರುವ ಜಿಲ್ಲಾಧಿಕಾರಿಗಳು ಮತ್ತು ಮಧ್ಯಸ್ಥಿಕೆದಾರರು ಮಾಡಿದ ಆದೇಶ ದಿನಾಂಕ 24.02.2010ನ್ನು ಅಪೀಲುದಾರನು ಮಾನ್ಯ ಏಕಪೀಠ ನ್ಯಾಯಾಧೀಶರ ಮುಂದೆ ಪ್ರಶ್ನಿಸಿದ್ದರು. ಮಾನ್ಯ ಏಕಪೀಠ ನ್ಯಾಯಾಧೀಶರು, ಸದರಿ ವಿಳಂಬ ಮನ್ನಾ ಮಾಡಿರುವುದನ್ನು ಎತ್ತಿಹಿಡಿದಿರುವುದರಿಂದ ಅಪೀಲುದಾರನು, ಈ ನ್ಯಾಯಾಲಯದ ಮುಂದೆ ಬಂದಿದ್ದಾನೆ.

2. 1 ರಿಂದ 14ನೇ ಎದುರುದಾರರು, ಕವಲೆಟ್ಟು ಗ್ರಾಮ, ರಾಣಿಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿರುವ ಭೂಮಿಗಳ ವಿವಿಧ ಭಾಗಗಳ ಭೂಮಾಲೀಕರಾಗಿದ್ದಾರೆಂಬುದು ಈ ಪ್ರಕರಣದ ಸಂಕ್ಷಿಪ್ತ ಸಂಗತಿಗಳಾಗಿವೆ. 2001 ರಲ್ಲಿ, ರಾಷ್ಟ್ರೀಯ ಹೆದ್ದಾರಿಗಳ ಅಧಿನಿಯಮದ (ಸಂಕ್ಷಿಪ್ತವಾಗಿ 'ಈ ಅಧಿನಿಯಮ') 3ಎ ಪ್ರಕರಣದ ಅಡಿಯಲ್ಲಿ ಭೂಸ್ವಾಧೀನವನ್ನು ಪ್ರಾರಂಭಿಸಿ ರಾಷ್ಟ್ರೀಯ ಹೆದ್ದಾರಿಗಳ ಅಧಿನಿಯಮದ ಅಡಿಯಲ್ಲಿ ಅದರ ಅಧಿಕಾರಗಳನ್ನು ಚಲಾಯಿಸಿ, ಹಡಗು, ರಸ್ತೆಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ, ಭಾರತ ಸರ್ಕಾರ 282 ರಿಂದ 515 ಕಿಲೋಮೀಟರ್ ವರೆಗೆ (ಹಾವೇರಿ, ಧಾರವಾಡ, ಬೆಳಗಾಂ) ರಾಷ್ಟ್ರೀಯ ಹೆದ್ದಾರಿ–4 ನ್ನು ಅಗಲೀಕರಿಸಲು ಆದೇಶಿಸಿದೆ ಸ್ವಾಧೀನ ವ್ಯವಹರಣೆಗಳನ್ನು, ಐತೀರ್ಪು ದಿನಾಂಕ 14.01.2004 ರಲ್ಲಿ ಮುಕ್ತಾಯಗೊಳಿಸಲಾಗಿದೆ. ಹಾಗಾಗಿ, 1 ರಿಂದ 14 ನೇ ಎದುರುದಾರರು, ಅವರಿಗೆ ಮಂಜೂರಾದ ಪರಿಹಾರದಿಂದ ಬಾಧಿತರಾಗಿದ್ದು ದಿನಾಂಕ 19.11.2009 ರಂದು, ಮಧ್ಯಸ್ಥದಾರರ ಮುಂದೆ ಈ ಅಧಿನಿಯಮದ 3ಜಿ (5)ನೇ ಪ್ರಕರಣದ ಅಡಿಯಲ್ಲಿ ಮಧ್ಯಸ್ಥ ಅಭಿಪ್ರಾಯ ಕೋರಿಕೆಗಾಗಿ ಕಳುಹಿಸಲು ಕೋರಲಾಗಿದೆ. ಅಪೀಲುದಾರನು ತಮ್ಮ ಆಕ್ಷೇಪಣೆಗಳನ್ನು ದಾಖಲು ಮಾಡಿದ್ದಾನೆ.

ಕಾಲಪರಿಮಿತಿ ಅವಧಿಯನ್ನು ಈ ಅಧಿನಿಯಮದಿಂದ ನಿರ್ದಿಷ್ಟಪಡಿಸದೇ ಇರುವುದರಿಂದ, ಈ ಅಧಿನಿಯಮದ 3ಜಿ(5) ನೇ ಪ್ರಕರಣದ ಅಡಿಯಲ್ಲಿ ಮಧ್ಯಸ್ಥದಾರನ ಮುಂದೆ ಉಲ್ಲೇಖವನ್ನು ದಾಖಲು ಮಾಡುವುದಕ್ಕಾಗಿ, ಕಾಲಪರಿಮಿತಿ ಅಧಿನಿಯಮದ 137ನೇ ಪ್ರಕರಣವನ್ನು ಓದಿಕೊಳ್ಳಬಹುದೆಂದು ಅಪೀಲುದಾರನು ವಾದಿಸಿದ್ದಾನೆ. ಕಾಲಪರಿಮಿತಿ ಅಧಿನಿಯಮದ 137 ನೇ ಪ್ರಕರಣದ ಅನುಸಾರವಾಗಿ ನಿರ್ದಿಷ್ಟಪಡಿಸಲಾದ ಕಾಲಪರಿಮಿತಿ ಅವಧಿ ಮೂರು ವರ್ಷಗಳು. ಆದುದರಿಂದ, 5 ವರ್ಷಗಳು ರದ್ದಾದ ತರುವಾಯ 1 ರಿಂದ 14ನೇ ಎದುರುದಾರರಿಂದ ಮಧ್ಯಸ್ಥ ಉಲ್ಲೇಖವನ್ನು ದಾಖಲಿಸಿರುವುದರಿಂದ ಅದು ಕಾಲಪರಿಮಿತಿ ವ್ಯಾಪ್ತಿಯಲ್ಲಿ ಸೇರುತ್ತದೆ. ಆದುದರಿಂದ, ಮಾನ್ಯ ಮಧ್ಯಸ್ಥದಾರರು ಮಧ್ಯಸ್ಥ ಉಲ್ಲೇಖವನ್ನು ವಜಾಗೊಳಿಸತಕ್ಕದ್ದೆಂದು ಮಾನ್ಯ ವಕೀಲರು ನಿವೇದಿಸಿದ್ದಾರೆ.

ಆದಾಗ್ಯೂ, ಆದೇಶ ದಿನಾಂಕ 24.02.2010ರ ಮೂಲಕ ಅಪೀಲುದಾರನು ಎತ್ತಲಾದ ಸದರಿ ವಾದವನ್ನು, ಜಿಲ್ಲಾಧಿಕಾರಿಗಳು ತಿರಸ್ಕರಿಸಿದ್ದಾರೆ ಮತ್ತು ಐದು ವರ್ಷಗಳ ವಿಳಂಬವನ್ನು ಮನ್ನಾ ಮಾಡಿದ್ದಾರೆ. ಅಪೀಲುದಾರನು, ಆದೇಶ ದಿನಾಂಕ 24.02.2010 ರಿಂದ ಬಾಧಿತನಾಗಿರುವುದರಿಂದ, ಈ ನ್ಯಾಯಾಲಯದ ಮುಂದೆ ರಿಟ್ ಅರ್ಜಿಗಳನ್ನು ದಾಖಲುಮಾಡಿದ್ದಾರೆ. ಆದಾಗ್ಯೂ, ಪ್ರಶ್ನಿತ ಆದೇಶ ದಿನಾಂಕ 15.02.2015 ರ ಮೂಲಕ, ಮಾನ್ಯ ಏಕಪೀಠ ನ್ಯಾಯಾಧೀಶರು, ರಿಟ್ ಅರ್ಜಿಗಳನ್ನು ವಜಾಗೊಳಿಸಿದ್ದಾರೆ ಮತ್ತು ಆದೇಶ ದಿನಾಂಕ 24.02.2010ನ್ನು ಎತ್ತಿಹಿಡಿದ್ದಾರೆ. ಆದ್ದರಿಂದ, ಈ ಅಪೀಲುಗಳು, ಈ ನ್ಯಾಯಾಲಯದ ಮುಂದೆ ಬಂದಿವೆ.

3. ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯಾದ ಶ್ರೀ ಸಚಿನ್ ಎಸ್. ಮಗಧಮ್ ಅವರು, ಮಾನ್ಯ ಮಧ್ಯಸ್ಥದಾರನ ಮುಂದೆ ಎತ್ತಲಾದ ವಾದಗಳನ್ನು ಪುನರುಚ್ಚರಿಸಲಾಗಿದ್ದು, ಮತ್ತು ಈ ಅಧಿನಿಯಮದ 3ಜಿ(5) ಪ್ರಕರಣದಲ್ಲಿ ಯಾವುದೇ ಕಾಲಪರಿಮಿತಿ ಅವಧಿಯನ್ನು ನಿರ್ದಿಷ್ಟಪಡಿಸದೇ ಇರುವುದರಿಂದ ಮಧ್ಯಸ್ಥದಾರನ ಮುಂದೆ ದಾಖಲುಮಾಡಿದ ಅರ್ಜಿಯು ಕಾಲಪರಿಮಿತಿ ಅಧಿನಿಯಮದ 137ನೇ ಪ್ರಕರಣದ ಮೂಲಕ ನಿರ್ದಿಷ್ಟಪಡಿಸಲಾದ ಕಾಲಪರಿಮಿತಿ ಅವಧಿಯು ಒಳಗೊಳ್ಳುತ್ತದೆಂದು ವಾದಿಸಿದ್ದಾರೆ. ಕಾಲಪರಿಮಿತಿ ಅಧಿನಿಯಮ 137ನೇ ಪ್ರಕರಣವು ಅರ್ಜಿಯನ್ನು ದಾಖಲು ಮಾಡುವುದಕ್ಕಾಗಿ ಮೂರು ವರ್ಷಗಳ ಅವಧಿಯನ್ನು ನಿರ್ದಿಷ್ಟಪಡಿಸಿರುವುದರಿಂದ, ಈ ಅಧಿನಿಯಮದ 3ಜಿ(5)ನೇ ಪ್ರಕರಣದ ಅಡಿಯಲ್ಲಿ ಮಾಡಿದ ಮಧ್ಯಸ್ಥ ಉಲ್ಲೇಖವನ್ನು ಮೂರು ವರ್ಷಗಳ ಮುಕ್ತಾಯದ ತರುವಾಯ ದಾಖಲು ಮಾಡಲಾಗದು. ಅಷ್ಟೇ ಅಲ್ಲದೆ, ಕಾಲಪರಿಮಿತಿ ಅಧಿನಿಯಮದ 5ನೇ ಪ್ರಕರಣದ ಅಡಿಯಲ್ಲಿ ವಿಳಂಬ ಮನ್ನಾಮಾಡುವ ಅಧಿಕಾರ, ಮಾನ್ಯ ಮಧ್ಯಸ್ಥದಾರರಿಗೆ ಲಭ್ಯವಿಲ್ಲ. ಆದ್ದರಿಂದ, ಮಾನ್ಯ ಮಧ್ಯಸ್ಥದಾರರು, ಅಪೀಲುದಾರನಿಂದ ಎತ್ತಲಾದ ವಾದವನ್ನು ಅಂಗೀಕರಿಸತಕ್ಕದ್ದೆಂದು ನಿವೇದಿಸಿದ್ದಾರೆ.

ಎರಡನೇಯದಾಗಿ, ಮಾನ್ಯ ಏಕಪೀಠ ನ್ಯಾಯಾಧೀಶರು, ಭಾರತ ಸಂವಿಧಾನದ 14ನೇ ಅನುಚ್ಛೇಧದ ಮೇಲೆ ಅವಲಂಬಿಸಿ ತಪ್ಪುಮಾಡಿದ್ದಾರೆ; ಮಾನ್ಯ ನ್ಯಾಯಾಧೀಶರು, ಕಾಲಪರಿಮಿತಿ ಅಧಿನಿಯಮದ 137ನೇ ಪ್ರಕರಣದ ಅನ್ವಯತೆಗೆ ಸಂಬಂಧಪಟ್ಟಂತೆ

ಅಪೀಲುದಾರನಿಂದ ಎತ್ತಲಾದ ಅಂಶವನ್ನು ಮತ್ತು ಮಾನ್ಯ ಮಧ್ಯಸ್ಥದಾರರಿಗೆ ಕಾಲಪರಿಮಿತಿ ಅಧಿನಿಯಮದ 5ನೇ ಪ್ರಕರಣದ ಅಡಿಯಲ್ಲಿ ಅಧಿಕಾರ ಲಭ್ಯತೆಗೆ ಸಂಬಂಧಪಟ್ಟದ್ದನ್ನು ತಪ್ಪಿಸಿದ್ದಾರೆ. ಆದ್ದರಿಂದ, ಪ್ರಶ್ನಿತ ಆದೇಶವನ್ನು ಈ ನ್ಯಾಯಾಲಯ ರದ್ದುಪಡಿಸುವುದಕ್ಕೆ ತಕ್ಕುದಾಗಿದೆಯೆಂದು ನಿವೇದಿಸಿದ್ದಾರೆ.

4. ಮತ್ತೊಂದು ಕಡೆ, 1 ರಿಂದ 14ನೇ ಎದುರುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯಾದ ಶ್ರೀ ಎಸ್.ಎಂ. ಕಲ್‌ವಾಡ್‌ರವರು ***ಉತ್ತಮ್ ನಾಮ್‌ದೇವ್ ಮಹಲೆ –ವಿರುದ್ಧ– ವಿತಲ್‌ದೇವ್ ಮತ್ತು ಇತರರು*** [1] ರ ಪ್ರಕರಣವನ್ನು ಅವಲಂಬಿಸಿದ್ದು, ವಿಶೇಷ ಪರಿನಿಯಮವು ಕಾಲಪರಿಮಿತಿ ಅವಧಿಯನ್ನು ನಿರ್ದಿಷ್ಟಪಡಿಸಲಾಗದಿದ್ದಲ್ಲಿ, ಸಾಮಾನ್ಯ ಕಾನೂನು ಪರಿಮಿತಿಯೂ ಸಹ ಅನ್ವಯಿಸದು ಎಂಬುದನ್ನು ತಮ್ಮ ವಾದಕ್ಕೆ ಪೂರಕವಾಗಿ ನಿವೇದಿಸಿದ್ದಾರೆ. ಹಾಗಾಗಿ, ಕಾಲಪರಿಮಿತಿ ಅಧಿನಿಯಮದ 137ನೇ ಪ್ರಕರಣದ ಅನ್ವಯತೆಯ ಪ್ರಶ್ನೆಯು, ಅಥವಾ ಕಾಲಪರಿಮಿತಿ ಅಧಿನಿಯಮದ 5ನೇ ಪ್ರಕರಣದ ಅಡಿಯಲ್ಲಿ ವಿಳಂಬವನ್ನು ಮನ್ನಾಮಾಡುವ ಅಧಿಕಾರದ ಲಭ್ಯತೆಯು, ಪ್ರಸ್ತುತ ಪ್ರಕರಣದಲ್ಲಿ ಸಹ ಉದ್ಭವಿಸದು. ಮಧ್ಯಸ್ಥ ಉಲ್ಲೇಖವನ್ನು ದೀರ್ಘವಾಗಿದ್ದರೂ, ಯುಕ್ತ ಸಮಯದೊಳಗೆ ಮಾಡಿರುವುದರಿಂದ, ಮಧ್ಯಸ್ಥ ಉಲ್ಲೇಖವನ್ನು ಮಾನ್ಯ ಮಧ್ಯಸ್ಥದಾರನಿಂದ ಪುರಸ್ಕರಿಸಬಹುದಾಗಿದೆ. ಆದ್ದರಿಂದ, ಮಾನ್ಯ ನ್ಯಾಯಾವಾದಿಯ ಪ್ರಕಾರ, ಮಾನ್ಯ ಮಧ್ಯಸ್ಥದಾರರಿಂದ ವಿಳಂಬವನ್ನು ಮನ್ನಾಮಾಡಿರುವುದು ಮತ್ತು ಮಾನ್ಯ ಏಕಪೀಠ ನ್ಯಾಯಾಧೀಶರು ದಿನಾಂಕ 24.02.2010 ಆದೇಶವನ್ನು ಎತ್ತಿಹಿಡಿದಿರುವುದು ಕಾನೂನುಬದ್ಧವಾಗಿ ನ್ಯಾಯ ಸಮ್ಮತವಾಗಿದೆ. ಆದ್ದರಿಂದ, ಮಾನ್ಯ ಮಧ್ಯಸ್ಥದಾರರು ಮಾಡಿದ ಆದೇಶ, ಮಾನ್ಯ ಏಕಪೀಠ ನ್ಯಾಯಾಧೀಶರು ಮಾಡಿರುವ ಆದೇಶ ಇವುಗಳಲ್ಲಿ ಈ ನ್ಯಾಯಾಲಯ ಹಸ್ತಕ್ಷೇಪ ಮಾಡುವ ಅಗತ್ಯವಿಲ್ಲವೆಂದಿದ್ದಾರೆ.

5. ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಲಾಗಿದೆ ಮತ್ತು ಪ್ರಶ್ನಿತ ಆದೇಶವನ್ನು ಪರಿಶೀಲಿಸಲಾಗಿದೆ.

1. (1997) 6 ಎಸ್‌ಸಿಸಿ 73

6. ಈ ಪ್ರಕರಣವು ಆಸಕ್ತಿಕರವಾದ ಕಾನೂನು ಅಂಶಗಳನ್ನು ಎತ್ತಿದೆ: ಮೊದಲನೆಯದಾಗಿ, ಮಧ್ಯಸ್ಥ ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕಾಗಿ ಕಾಲಪರಿಮಿತಿ ಅವಧಿಯನ್ನು ವಿಶೇಷ ಪರಿನಿಯಮ ನಿರ್ದಿಷ್ಟಪಡಿಸಿಲ್ಲದಿರುವಾಗ ಕಾಲಪರಿಮಿತಿ ಅಧಿನಿಯಮವನ್ನು ಅನ್ವಯಿಸಬಹುದೆ? ಎರಡನೆಯದಾಗಿ, ಕಾಲಪರಿಮಿತಿ ಅವಧಿ ನಿರ್ದಿಷ್ಟಪಡಿಸುವುದು ಇಲ್ಲದಿರುವಾಗ, ಕಾಲಪರಿಮಿತಿ ಅಧಿನಿಯಮದ 137ನೇ ಪ್ರಕರಣವನ್ನು ಅವಲಂಬಿಸಬಹುದಾಗಿದೆಯೇ? ಮೂರನೇಯದಾಗಿ, ಕಾಲಪರಿಮಿತಿಯ 137ನೇ ಪ್ರಕರಣವನ್ನು ಅನ್ವಯಿಸಿದ ಸಂದರ್ಭದಲ್ಲಿ, ಮಾನ್ಯ ಮಧ್ಯಸ್ಥದಾರರು, ಕಾಲಪರಿಮಿತಿ ಅಧಿನಿಯಮದ 5ನೇ ಪ್ರಕರಣದ ಅಡಿಯಲ್ಲಿ ಅಧಿಕಾರವು ವಿಳಂಬವನ್ನು ಮನ್ನಾ ಮಾಡಬಹುದೇ ಅಥವಾ ಇಲ್ಲವೇ? ಕಾಲಪರಿಮಿತಿ ಅವಧಿಯನ್ನು ನಿರ್ದಿಷ್ಟಪಡಿಸದೇ ಇರುವ ಸಂದರ್ಭದಲ್ಲಿ, ಅರ್ಜಿ/ ಮನವಿಯನ್ನು ವಿಳಂಬದ ತರುವಾಯ ದಾಖಲು ಮಾಡಿದ್ದಲ್ಲಿ ಮತ್ತು ಲೋಪವಾಗುತ್ತದೆಯೇ ಅಥವಾ ಇಲ್ಲವೇ? ಕೊನೆಯದಾಗಿ, ಮಧ್ಯಸ್ಥದಾರನಿಗೆ, ವಿಳಂಬದ ಪ್ರಶ್ನೆಯನ್ನು ನಿರ್ವಹಿಸುವ ಅಧಿಕಾರವಿದೆಯೇ? ಅದು ಲೋಪವೆ ಅಥವಾ ಇಲ್ಲವೆ?

7. (ಮೇಲೆ ಹೇಳಲಾದ) ***ಉತ್ತಮ್ ನಾಮ್‌ದೇವ್ ಮಹಲೆ*** ಪ್ರಕರಣದಲ್ಲಿ, ವಿವಾದಾಂಶದ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ, 12 ವರ್ಷಗಳು ಕಳೆದುಹೋದ ತರುವಾಯ ಮಾಮಲ್ತೆದಾರ ನ್ಯಾಯಾಲಯದ ಮುಂದೆ ವ್ಯವಹರಣೆಯನ್ನು ಪ್ರಾರಂಭಿಸುವುದಕ್ಕೆ ಕಾಲಪರಿಮಿತಿ ಅನ್ವಯಿಸುತ್ತದೆಯೆ ಅಥವಾ ಇಲ್ಲವೆ ಎಂಬ ವಿವಾದಾಂಶವನ್ನು ರೂಪಿಸಲಾಗಿದ್ದು, ಅದರಡಿಯಲ್ಲಿ ನಿರ್ದಿಷ್ಟಪಡಿಸುವ ಯಾವುದೇ ನಿರ್ದಿಷ್ಟ ಕಾಲಪರಿಮಿತಿ ಕೊರತೆಯಿಂದ, ಅಗತ್ಯ ಇಂಗಿತದ, ನಿಲುವುಗಳನ್ನು ಹೊರತುಪಡಿಸಿದ ಕಾಲಪರಿಮಿತಿ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಸಾಮಾನ್ಯ ಕಾನೂನು ಇಂಗಿತವಾಗಿದೆಯೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯ ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದೆ". ಈ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಮಾಮಲ್ತೆದಾರ ನ್ಯಾಯಾಲಯವು ಅಧಿನಿಯಮವು ಅಗತ್ಯ ಆದೇಶವನ್ನು ಜಾರಿಗೊಳಿಸಲು ಅದರೊಳಗೆ ಯಾವುದೇ ಕಾಲಪರಿಮಿತಿಯನ್ನು ನಿರ್ದಿಷ್ಟಪಡಿಸಿರುವುದಿಲ್ಲವೆಂಬುದನ್ನು ಹೇಳಿತ್ತು.

8. ಅದೇ ರೀತಿಯಾಗಿ, ಈ ಅಧಿನಿಯಮದ 3ಜಿ(5) ನೇ ಪ್ರಕರಣ, ಮಧ್ಯಸ್ಥದಾರನಿಗೆ ಮಾಡಬಹುದಾದ ಉಲ್ಲೇಖಕ್ಕಾಗಿ ಯಾವುದೇ ಕಾಲಪರಿಮಿತಿಯ ಅವಧಿಯನ್ನು ನಿರ್ದಿಷ್ಟಪಡಿಸಿರುವುದಿಲ್ಲ. ಆದ್ದರಿಂದ, (ಮೇಲೆ ಹೇಳಲಾದ) ***ಉತ್ತಮ್ ನಾಮ್‌ದೇವ್ ಮಹಲೆ*** ಅನುಪಾತವನ್ನು ಗಮನದಲ್ಲಿಟ್ಟುಕೊಂಡು, ಕಾಲಪರಿಮಿತಿ ಅವಧಿಯನ್ನು ಈ ಅಧಿನಿಯಮದಿಂದ ನಿರ್ದಿಷ್ಟಪಡಿಸಿಲ್ಲದಿರುವುದರಿಂದ, ಈ ಅಧಿನಿಯಮದ 3ಜಿ(5) ನೇ ಪ್ರಕರಣದ ಅಡಿಯಲ್ಲಿ, ಕಾಲಪರಿಮಿತಿ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಸಾಮಾನ್ಯ ಕಾನೂನು ಕಾಲಪರಿಮಿತಿಯನ್ನು ಹೊರತುಪಡಿಸಲಾಗಿದೆಯೆಂದು ಈ ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

9. ಕಾಲಪರಿಮಿತಿ ಅಧಿನಿಯಮವು, ಅಂಥ ಸಂದರ್ಭಗಳಲ್ಲಿ ಅನ್ವಯಿಸದಿರುವುದರಿಂದ, ಕಾಲಪರಿಮಿತಿ ಅಧಿನಿಯಮದ 137ನೇ ಪ್ರಕರಣದ ಮೂಲಕ ನಿರ್ದಿಷ್ಟಪಡಿಸಲಾದ ಕಾಲಪರಿಮಿತಿಯ ಅವಧಿಯು ಅನ್ವಯವಾಗುತ್ತದೆಯೆ ಅಥವಾ ಇಲ್ಲವೆ ಎಂಬುದು ವಿವಾದಾಂಶವಾಗಿದೆ ಅಥವಾ ಅಗತ್ಯ ಕಾಲಪರಿಮಿತಿ ಅಧಿನಿಯಮದ 5ನೇ ಪ್ರಕರಣದ ಅಡಿಯಲ್ಲಿ ಮಧ್ಯಸ್ಥದಾರನಿಗೆ ವಿಳಂಬವನ್ನು ಮನ್ನಾಮಾಡುವ ಅಧಿಕಾರವು, ಲಭ್ಯವಿದೆಯೆ ಎಂಬ ಬಗ್ಗೆ ಈ ನ್ಯಾಯಾಲಯದಿಂದ ಉತ್ತರಿಸುವ ಅಗತ್ಯವಿರುವುದಿಲ್ಲ.

10. ಆದಾಗ್ಯೂ, ಕೇವಲ ಕಾಲಪರಿಮಿತಿ ಅವಧಿಯನ್ನು ಈ ಅಧಿನಿಯಮದ 3ಜಿ(5) ನೇ ಪ್ರಕರಣದ ಮೂಲಕ ನಿರ್ದಿಷ್ಟಪಡಿಸಿಲ್ಲವಾದ್ದರಿಂದ, ಸದರಿ ಅಧಿನಿಯಮದ ಅಡಿಯಲ್ಲಿ ಅರ್ಜಿಯನ್ನು ಮಿತಿಮೀರಿದ ವಿಳಂಬದ ತರುವಾಯ ದಾಖಲು ಮಾಡಬಹುದೆಂದು ಅರ್ಥೈಸಲಾಗದು. ಕಾಲಪರಿಮಿತಿ ಅವಧಿಯ ಪರಿನಿಯಮದ ಮೂಲಕ ನಿರ್ದಿಷ್ಟ ಪಡಿಸಿಲ್ಲದ ಸಂದರ್ಭದಲ್ಲಿ ಅರ್ಜಿ ಅಥವಾ ಮನವಿಯನ್ನು 'ಯುಕ್ತ ಸಮಯ' ದೊಳಗೆ ದಾಖಲು ಮಾಡಬೇಕು. ಈ ಅಧಿನಿಯಮದ 3ಜಿ (5) ನೇ ಪ್ರಕರಣದ ಅಡಿಯಲ್ಲಿ ಮಾನ್ಯ ಮಧ್ಯಸ್ಥದಾರನಿಂದ ಆತನು/ಆಕೆಯು ಅಧಿಕಾರ ಚಲಾಯಿಸುವಾಗ ಅರ್ಜಿಯನ್ನು, ಯುಕ್ತ ಸಮಯದೊಳಗೆ ದಾಖಲುಮಾಡಿದೆಯೆ ಅಥವಾ ಇಲ್ಲವೆ ಎಂಬ ಸಂಗತಿಯನ್ನು ಪರಿಶೀಲಿಸುವ ಪ್ರಶ್ನೆಯಾಗಿರುವುದಿಲ್ಲ.

11. ಮಾನ್ಯ ಮಧ್ಯಸ್ಥದಾರನು ಮೂರು ಸಂದರ್ಭಗಳ ಅಡಿಯಲ್ಲಿ, ಉಲ್ಲೇಖಕ್ಕಾಗಿನ ಅರ್ಜಿಯನ್ನು ತಿರಸ್ಕರಿಸಿರುವುದು ನ್ಯಾಯಸಮ್ಮತವಾಗಿದೆ: (i) ಪಕ್ಷಕಾರನು ಮಧ್ಯಸ್ಥದಾರನನ್ನು ಕೋರಿದ್ದಲ್ಲಿ. ತಡವಾಗಿ ಮಧ್ಯಸ್ಥದಾರನ ಬಳಿಗೆ ಬಂದಲ್ಲಿ; (ii) ಮೂರನೇ ಪಕ್ಷಕಾರನ ಹಿತಾಸಕ್ತಿಯು, ಐತೀರ್ಪನ್ನು ವಿಶೇಷ ಭೂಸ್ವಾಧೀನಾಧಿಕಾರಿ ಮಾಡಿದ ಅವಧಿಯ ಸಮಯದಲ್ಲಿ ಉದ್ಭವಿಸಿದ್ದಲ್ಲಿ ಮತ್ತು ಮಾನ್ಯ ಮಧ್ಯಸ್ಥದಾರನ ಮುಂದೆ ಅರ್ಜಿಯನ್ನು ದಾಖಲುಮಾಡಿದ್ದಲ್ಲಿ; (iii) ಮೊಕದ್ದಮೆಯ ಸನ್ನಿವೇಶಗಳಡಿಯಲ್ಲಿ ಸಮನ್ವಯವನ್ನು ಸರಿದೂಗಿಸದಿದ್ದಲ್ಲಿ.

12. ಹೀಗಾಗಿ, ಮಧ್ಯಸ್ಥದಾರನು, ಮಿತಿಮೀರಿದ ವಿಳಂಬದ ಅಂಶದ ಮೇಲೆ ಮತ್ತು ಅರ್ಜಿಯು, ವಿಳಂಬ ಮತ್ತು ಲೋಪಗಳಿಂದ ಕೂಡಿದೆಯೆಂಬ ಅಂಶದ ಮೇಲೆ ಉಭಯ ಪಕ್ಷಕಾರ ಸುನಾವಣೆಯನ್ನು ಮಾಡಿರುವುದು ಸಮರ್ಥನೀಯವಾಗಿದೆ.

13. ಮೇಲೆ ಹೇಳಲಾದ ಕಾರಣಗಳಿಗಾಗಿ, ಈ ನ್ಯಾಯಾಲಯವು ಕಾಲಪರಿಮಿತಿ ಅಧಿನಿಯಮದ 137ನೇ ಪ್ರಕರಣದ ಮೂಲಕ ನಿರ್ದಿಷ್ಟಪಡಿಸಲಾದ ಕಾಲಪರಿಮಿತಿ ಅವಧಿಯನ್ನು, ಈ ಅಧಿನಿಯಮದ 3ಜಿ(5) ನೇ ಪ್ರಕರಣದ ಅಡಿಯಲ್ಲಿ ಮಧ್ಯಸ್ಥಿಕೆ ವ್ಯವಹರಣೆಯಲ್ಲಿ ಓದಿಕೊಳ್ಳಬಹುದಾಗಿದೆಯೆಂಬ ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯ ವಾದವನ್ನು ಒಪ್ಪಲಾಗದು. ಹೀಗಾಗಿ, ಮಾನ್ಯ ಮಧ್ಯಸ್ಥದಾರರು, ಐದು ವರ್ಷಗಳ ವಿಳಂಬವನ್ನು ಮನ್ನಾಮಾಡಿರುವುದು ಸಮರ್ಥನೀಯವಾಗಿದೆ. ಹಾಗಾಗಿ, ಈ ನ್ಯಾಯಾಲಯಕ್ಕೆ ಪ್ರಶ್ನಿತ ಆದೇಶ ದಿನಾಂಕ: 15.02.2013 ರಲ್ಲಿ ಯಾವುದೇ ಕಾನೂನು ಬಾಹಿರತೆ ಅಥವಾ ವಕ್ರತೆಯು ಕಂಡುಬರುವುದಿಲ್ಲ.

ಮೇಲೆ ಹೇಳಲಾದ ಕಾರಣಗಳಿಗಾಗಿ, ಈ ನ್ಯಾಯಾಲಯಕ್ಕೆ, ಪ್ರಸ್ತುತ ಅಪೀಲುಗಳಲ್ಲಿ ಯಾವುದೇ ಗುಣಾರ್ಹತೆಯು ಕಂಡುಬರುವುದಿಲ್ಲ. ಹಾಗಾಗಿ, ಅಪೀಲುಗಳನ್ನು ವಜಾಗೊಳಿಸಲಾಗಿದೆ.

---